# ಅನುಪಮ ಖವ್ವಾಲ್ ಅಮ್ಜದ್ ಸಾಬ್ರಿ



ಭಾರತ ಉಪಖಂಡದ ಅತ್ಯಂತ ಜನಪ್ರಿಯ ಖವ್ವಾಲಿ ತಂಡ 'ಸಾಬ್ರಿ ಬ್ರದರ್ಸ್.' ಸಾಬ್ರಿ ಬ್ರದರ್ಸ್ ತಂಡದ ಈಗಿನ ರೂವಾರಿ ಅಮ್ಜದ್ ಸಾಬ್ರಿ ಉಗ್ರರ ಗುಂಡೇಟಿಗೆ ಬಲಿಯಾಗಿದ್ದಾರೆ. ಕರಾಚಿಯಲ್ಲಿ ಅವರ ಮನೆಯ ಬಳಿಯೇ ಕಾರಿನಲ್ಲಿ ತೆರಳುತ್ತಿದ್ದಾಗ ಬೈಕ್‌ನಲ್ಲಿ ಬಂದ ಹಂತಕರು 'ಸಂಗೀತ'ದ ಕೊಲೆ ನಡೆಸಿರುವುದು ಆ ದೇಶ ಎಂತಹ ದುರಂತ ಸ್ಥಿತಿಯತ್ತ ಸಾಗುತ್ತಿದೆ ಎನ್ನುವುದಕ್ಕೆ ಸಾಕ್ಷಿಯಂತಿದೆ. ಭಾರತ, ಪಾಕಿಸ್ತಾನ, ಬ್ರಿಟನ್ ಮತ್ತು ಅಮೆರಿಕಗಳಲ್ಲಿ ನೂರಾರು ಸೂಫಿ ಸಂಗೀತ ಕಾರ್ಯಕ್ರಮಗಳನ್ನು ನೀಡಿ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ಅಮ್ಜದ್ ಸಾಬ್ರಿ ಅವರಿಗೆ ಇನ್ನೂ 45ರ ಹರೆಯ. ಹತ್ಯೆ ನಡೆಸಿದ್ದು ತಾಲಿಬಾನಿನ ಒಂದು ಬಣ ಎನ್ನುವುದು ಮೊದಲ ವರದಿ. ಆರು ತಿಂಗಳ ಹಿಂದೆ ಅಮ್ಜದ್ ಸಾಬ್ರಿ ಮನೆಯ ಮುಂಭಾಗದಲ್ಲಿ ಕೆಲವು ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದರು. ಆದರೆ ಆಗ ಅಮ್ಜದ್ ಮನೆಯಲ್ಲಿರಲಿಲ್ಲ. ಆ ಬಳಿಕ ಅಲ್ಲಿನ ಸರ್ಕಾರಕ್ಕೆ ರಕ್ಷಣೆಗಾಗಿ ಅರ್ಜಿ ಸಲ್ಲಿಸಿದರೂ ಸರ್ಕಾರ 'ಕ್ಯಾರೆ' ಎಂದಿರಲಿಲ್ಲ. ಈಗ ನಡೆಯಬಾರದ್ದು ನಡೆದುಹೋಗಿದೆ. ಪರಸ್ಪರ ಸೌಹಾರ್ದದ ಬಾಳ್ವೆಗೆ ಬಹುದೊಡ್ಡ ಕಾಣಿಕೆ ನೀಡುತ್ತಿರುವ ಸೂಫಿ ಪಂಥವನ್ನು 'ಇಸ್ಲಾಮ್‌ವಿರೋಧಿ' ಎಂದು ತಾಲಿಬಾನ್ ಘೋಷಿಸಿರುವುದು ಹಳೆಯ ಕಥೆ. ಈ ಕುರಿತು ಸಾಕಷ್ಟು ವಾದ ವಿವಾದಗಳು ನಡೆಯುತ್ತಿದ್ದರೂ ಹೀಗೊಂದು ಬರ್ಬರ ಹತ್ಯೆಯ ಘಟನೆ ನಡೆದಿರಲಿಲ್ಲ. ಇದೀಗ ಹಾರ್ಮೋನಿಯಂ ಮೇಲೆ ಶಾಶ್ವತವಾಗಿ ರಕ್ತ ಮೆತ್ತಿಕೊಂಡಂತಾಗಿದೆ.

ಪಂಜಾಬ್ ಪ್ರಾಂತ್ಯದಲ್ಲಿ ಸಂತರ ಗೋರಿಗಳ ಸುತ್ತಮುತ್ತ ಹುಟ್ಟಿಕೊಂಡ ಸೂಫಿ ಸಂಗೀತ ಮುಖ್ಯವಾಗಿ 'ದೇವರ ಜತೆಗೊಂದು ಸಂವಾದ' ಎಂಬಂತೆ ಬಿಂಬಿತವಾಗಿದೆ. ಅಲ್ಲಾಹನನ್ನು, ಅವನ ಪ್ರವಾದಿಗಳನ್ನು, ಸಂತರನ್ನು ಶ್ಲಾಘಿಸಿ ಬರೆದ ಪರ್ಷಿಯನ್ ಭಾಷಾ ಮೂಲದ ಹಾಡುಗಳನ್ನು ಭಕ್ತಿಪರವಶವಾಗಿ ಹಾಡುವುದು ಖವ್ವಾಲಿ ಶೈಲಿ. ಮೂಲತಃ ನಮ್ಮ ಹಿಂದೂಸ್ತಾನಿ ಸಂಗೀತದ ಜತೆಗೆ ದೊಡ್ಡಮಟ್ಟದ ಕೊಡುಕೊಳ್ಳುವಿಕೆ ಇರುವ ಖವ್ವಾಲಿಗೆ ಭಾರತ ಮತ್ತು ಪಾಕಿಸ್ತಾನದಲ್ಲಿ ಬಹುದೊಡ್ಡ ಬೆಂಬಲಿಗ ವರ್ಗವಿದೆ. ದೇವರ ಜತೆಗೆ ಸಂಗೀತದ ಮೂಲಕ ಸಂಪರ್ಕ ಸಾಧಿಸುವುದು ಬಹುತೇಕ ಸೂಫಿ ಸಂತರ ಇಂಗಿತವೂ ಹೌದು.

ಸಾಬ್ರಿ ಬ್ರದರ್ಸ್ ತಂಡ ಕಟ್ಟಿದ್ದು ಕಳೆದ ಶತಮಾನದ 50ರ ದಶಕದ ಉತ್ತರಾರ್ಧದಲ್ಲಿ. ಗುಲಾಂ ಫರೀದ್ ಸಾಬ್ರಿ ಮತ್ತು ಅವರ ಸೋದರ ಮಕ್ಬೂಲ್ ಸಾಬ್ರಿ ಇಬ್ಬರೂ ಪಾಕಿಸ್ತಾನದಲ್ಲಿ ಖವ್ವಾಲಿಗೆ ಹೊಸ ಖದರ್ ನೀಡಿದರು. ಈ ಗುಲಾಮ್ ಫರೀದ್ ಅವರ ಮಗನೇ ಅಮ್ಜದ್ ಸಾಬ್ರಿ. ಸಾಬ್ರಿ ಕುಟುಂಬದ ಪೂರ್ವಜರು, ಭಾರತದ ಮೊಘಲ್ ಸಾಮ್ರಾಜ್ಯದ ಆಸ್ಥಾನದಲ್ಲಿ ಸಂಗೀತಗಾರರಾಗಿದ್ದವರು. 9ರ ಬಾಲ್ಯದಲ್ಲೇ ಅಪ್ಪನ ಜತೆ ಖವ್ವಾಲಿ ಕಲಿಕೆ ಶುರುಮಾಡಿದ ಅಮ್ಜದ್, 12ನೇ ವಯಸ್ಸಿನಲ್ಲಿ ತಂದೆಯ ಜತೆಗೆ ವೇದಿಕೆ ಹತ್ತಿದ್ದರು. ಅಪ್ಪ ಮತ್ತು ಚಿಕ್ಕಪ್ಪ ಇಬ್ಬರೂ ತೀರಿಕೊಂಡ ಬಳಿಕ ತಂಡವನ್ನು ಸೋದರರ ಜತೆ ಸೇರಿ ಮುನ್ನಡೆಸಿದ್ದು ಅಮ್ಜದ್ ಸಾಧನೆ. ಒಂದೆಡೆ ಪಾಕಿಸ್ತಾನದಲ್ಲಿ ಫತೇ ಅಲಿ ಖಾನ್ ಅವರ ಮಗ ನುಸ್ರತ್ ಫತೇ ಅಲಿ ಖಾನ್ ತಂಡ ಸಾಂಪ್ರದಾಯಕ ಖವ್ವಾಲಿಯನ್ನು ಜನಪ್ರಿಯಗೊಳಿಸಿತ್ತು. ಅದೇ ವೇಳೆಗೆ ಸಂಗೀತ ಉಪಕರಣಗಳಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ರೂಢಿಸಿಕೊಂಡು ಅಮ್ಜದ್ ಸಾಬ್ರಿ ತಂಡ ಕಟ್ಟಿದರು. ಮುಖ್ಯವಾಗಿ ಸಂತ ಅಮೀರ್ ಖುಸ್ರೊ (ಇವರ ಸಮಾಧಿ ದೆಹಲಿಯಲ್ಲಿದೆ) ಬರೆದ ಪರ್ಶಿಯನ್ ಕವಿತೆಗಳಿಗೆ ಧ್ವನಿಯಾದರು ಅಮ್ಜದ್ ಬ್ರದರ್ಸ್.

ತಜ್ದರ್ ಎ ಹರಮ್, ಭರ್‌ದೆ ಜೋಲಿ ಮತ್ತು ಮೇರಾ ಕೋಯಿ ನಹೀ ಹೈ ತೇರಾ ಸಿವಾ ಮುಂತಾದ ಹಾಡುಗಳು 'ಸಾಬ್ರಿ ಬ್ರ್ಯಾಂಡ್' ಎಂದೇ ಗುರುತಿಸಿಕೊಂಡು ಸೂಪರ್‌ಹಿಟ್ ಆದವು. ಕಳೆದ 2 ದಶಕಗಳಲ್ಲಿ ಸಾಬ್ರಿ ಬ್ರದರ್ಸ್ ಹಾಡಿದ್ದೆಲ್ಲವೂ ಹಿಟ್ ಎನ್ನುವಂತೆ ಸಿ.ಡಿ ಗಳು ಮಾರಾಟವಾಗಿವೆ. ಯೂರೋಪ್ ಮತ್ತು ಅಮೆರಿಕದ ಬಹುಮುಖ್ಯ ನಗರಗಳಲ್ಲಿ ಸಾಬ್ರಿ ಬ್ರದರ್ಸ್ ಕಾರ್ಯಕ್ರಮಗಳಿಗೆ ಅವರದ್ದೇ ಆದ ಸಾವಿರಾರು ಶ್ರೋತೃಗಳು ಸೇರುತ್ತಿದ್ದರು. 2008ರಲ್ಲಿ ಬಂದ ಹಲ್ಲಾಬೋಲ್ ಎಂಬ ಹಿಂದಿ ಸಿನಿಮಾದಲ್ಲಿ 'ಹಾಜಿ ಪಿಯಾ..' ಖವ್ವಾಲಿ ಅಮ್ಜದ್ ಸಾಬ್ರಿ ಸ್ವರದಲ್ಲಿ ಅತ್ಯಂತ ಜನಪ್ರಿಯವಾಗಿತ್ತು. 'ಭರ್‌ದೊ ಜೋಲಿ..' ಖವ್ವಾಲಿಯನ್ನು ಕಳೆದ ವರ್ಷ ಬಿಡುಗಡೆಯಾದ ಸಲ್ಮಾನ್ ಖಾನ್‌ನ 'ಭಜರಂಗಿ ಭಾಯ್‌ಜಾನ್' ಸಿನಿಮಾದಲ್ಲಿ ಅಡ್ನಾನ್ ಸಾಮಿ ಹಾಡಿದ್ದರು. ಆದರೆ ಖವ್ವಾಲಿಪ್ರಿಯರಿಗೆ ಅದು ಇಷ್ಟವಾಗದೆ ಸಾಕಷ್ಟು ಟೀಕಾ ಪ್ರಹಾರ ನಡೆದಿತ್ತು. ಕೊನೆಗೆ ಅಮ್ಜದ್ ಸಾಬ್ರಿಯವರೇ ಅಡ್ನಾನ್‌ರನ್ನು ಬೆಂಬಲಿಸಿ 'ಒಳ್ಳೆಯ ಪ್ರಯತ್ನ' ಎಂದು ಶ್ಲಾಘಿಸಬೇಕಾಯಿತು.

ಕಳೆದ ವರ್ಷ ಟೀವಿಯೊಂದರಲ್ಲಿ ಅಮ್ಜದ್ ಹಾಡಿದ ಖವ್ವಾಲಿಯೊಂದರಲ್ಲಿ ಪ್ರವಾದಿ ಮುಹಮ್ಮದರ ಕುಟುಂಬದ ಸದಸ್ಯರ ಹೆಸರುಗಳನ್ನು ಬಳಸಿದ್ದು, ಇದು ಧರ್ಮದ್ರೋಹ ಎಂಬ ವಾದ ಮಂಡಿಸಿ ವಕೀಲರೊಬ್ಬರು ಇಸ್ಲಾಮಾಬಾದ್ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದ್ದರು. ಆದರೆ ಉಗ್ರರ ವಿತಂಡವಾದದ ಬಗ್ಗೆ ಅಮ್ಜದ್ ಅಷ್ಟಾಗಿ ತಲೆಕೆಡಿಸಿಕೊಂಡಿರಲಿಲ್ಲ. ಸೂಫಿ ಪಂಥದ ತಿರುಳೇ ಅದು. ಅಲ್ಲಿ ಬಡವಬಲ್ಲಿದ, ಮೇಲ್ಜಾತಿಕೆಳಜಾತಿ ಅಥವಾ ಹಿಂದೂಮುಸ್ಲಿಂ ಎಂಬ ಭೇದಭಾವವಿಲ್ಲ. ಭಕ್ತಿ ಸಂಗೀತದ ಮೂಲಕ ದೇವರ ಜತೆಗೆ ಸಂವಾದ ನಡೆಸುವ ಖವ್ವಾಲ್‌ಗೆ ಪ್ರಾಪಂಚಿಕ ಭಿನ್ನತೆಗಳು ಅಡ್ಡಗೋಡೆಯಾಗುವುದಿಲ್ಲ. ಆದರೆ ಈಗ ಸಂಗೀತದ ಗೋರಿಯ ರಕ್ತದ ಕಲೆ ಅಂಟಿರುವುದು ಮಾತ್ರ ವಿಷಾದದ ಸಂಗತಿ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65